ದಿನಾಂಕಃ 19.07.2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ

ಸರ್ವೆ ನಂ.20ರ ಪೂರ್ವಕ್ಕೆ ಲಕ್ಷ್ಮಣ ಗುಂಡಪ್ಪಗೋಳ್ ಮತ್ತು ರಾಮಪ್ಪ ಗುಂಡಪ್ಪಗೋಳ್‌ರವರ ಆಸ್ತಿ ಬರುತ್ತದೆ ಎಂದರೆ ಸರಿ. ಪಶ್ಚಿಮಕ್ಕೆ ಕಸ್ತೂರಿ ದಾನಪ್ಪಗೋಳ ರವರ ಹೊಲ ಬರುತ್ತದೆ ಎಂದರೆ ಸರಿ. ಲಕ್ಷ್ಮಣ ಗುಂಡಪ್ಪಗೋಳ್ ಮತ್ತು ರಾಮಪ್ಪ ಗುಂಡಪ್ಪಗೋಳ್‌ರವರ ಆಸ್ತಿ ದಕ್ಷಿಣ ಉತ್ತರಾಭಿಮುಖ ಆಗಿರುತ್ತದೆ ಎಂದರೆ ಸರಿ. ನನ್ನ ಮತ್ತು ನನ್ನ ಅಣ್ಣ ಸದಾಶಿವರವರಿಗೆ ಬಂದ ಜಮೀನಿನ ಮಧ್ಯದಲ್ಲಿ ಸತ್ಯಪ್ಪರವರ ಜಮೀನು ಇರುತ್ತದೆ. ಅವರ ಜಮೀನು ಹಳ್ಳಕ್ಕೆ ತಾಗಿಕೊಂಡು 33 ಗುಂಟೆ ಇದೆ ಎಂದರೆ ಸರಿ. ಅವರ ಜಮೀನಿನ ಉತ್ತರಕ್ಕೆ ನನ್ನ ತಮ್ಮ ಸುಭಾಷ ಖರೀದಿಗೆ ಪಡೆದ 18 ಗುಂಟೆ ಜಮೀನು ಇದೆ ಎಂದರೆ ಸರಿ. ಅದರ ನಂತರ ಸತ್ಯಪ್ಪರವರ 33 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಅದರ ನಂತರ ನನ್ನ 16 ಗುಂಟೆ ಜಮೀನು ಇರುತ್ತದೆ. ಅದರ ಉತ್ತರಕ್ಕೆ ಸುಭಾಷರವರ 15 ಗುಂಟೆ ಜಮೀನು ಇದೆ ಎಂದರೆ ಸರಿ. ಅದರ ಉತ್ತರಕ್ಕೆ 2003-04ರಲ್ಲಿ 20 ಗುಂಟೆ ಜಮೀನು ನನ್ನ ಹೆಸರಿನಲ್ಲಿತ್ತು ಎಂದರೆ ಸರಿ. ಇದರ ಉತ್ತರದ ಭಾಗದಲ್ಲಿ ನನ್ನ ಮನೆ ಇದೆ ಎಂದರೆ ಸರಿಯಲ್ಲ ನಿಮ್ಮ ಮನೆಯ ಉತ್ತರಕ್ಕೆ ಸತ್ಯಪ್ಪರವರ 2 ಎಕರೆ 2 ಗುಂಟೆ ಜಮೀನು ಇರುತ್ತದೆ ಎಂದರೆ ಸಾಕ್ಷಿ ನನ್ನ ಮನೆಯ ಉತ್ತರಕ್ಕೆ ಸದಾಶಿವ ಉದ್ದಪ್ಪ ಗುಂಡಪ್ಪಗೋಳ್‌ರವರ ಆಸ್ತಿ ಇದೆ ನಂತರ ಸತ್ಯಪ್ಪರವರ ಆಸ್ತಿ ಇದೆ ಎನ್ನುತ್ತಾರೆ. ಅದರ ನಂತರ ಉತ್ತರಕ್ಕೆ 2003 ರಲ್ಲಿ ನನ್ನ ಹೆಸರಿನಲ್ಲಿ 22 ಗುಂಟೆ ಜಮೀನು ಇತ್ತು ಎಂದರೆ ಸರಿ. ದಾವಾ ಸ್ವತ್ತು 3 ಕಡೆ ಇದೆ ಎಂದರೆ ಸರಿ.

2. ಸುಭಾಷ ಜೀವಂತವಿರುವಾಗ 2015 ರಲ್ಲಿ ಸರ್ವೆ ಕಚೇರಿಯಲ್ಲಿ ಪೋಡಿ ಮಾಡಿ ಎಂದು ಅರ್ಜಿ ಸಲ್ಲಿಸಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಅದರ ಬಗ್ಗೆ ಮಾರ್ಚ್ 2021ರಲ್ಲಿ ನಮ್ಮ ಹೊಲದ ಬಳಿ ವಿಚಾರಣೆಗೆ ಬಂದಿದ್ದರು ಎಂದರೆ ಸರಿ. ಆಗ ನಾನು, ಪೂರ್ವ-ಪಶ್ಚಿಮಕ್ಕೆ ಇದ್ದ ಮಾಲೀಕರು ಮತ್ತು ಉತ್ತರ-ದಕ್ಷಿಣಕ್ಕೆ ಇದ್ದ ಮಾಲೀಕರು ಸಹಿ ಮಾಡಿದ್ದೇವೆಂದರೆ ಸರಿಯಲ್ಲ. ಪೋಡಿಯ ಪ್ರಕಾರ ಈಗ ಪ್ರತ್ಯೇಕ ಹಿಸ್ಸಾಗಳಾಗಿವೆ

ಎಂದರೆ ಸರಿಯಲ್ಲ. ನನ್ನ, ಲಕ್ಷಣ, ರಾಮಪ್ಪ ಮತ್ತು ಸತ್ಯಪ್ಪರವರ ಸಮಕ್ಷಮ ಸರ್ವೇ ಮಾಡಿ ಪೋಡಿ ಮಾಡಿದ್ದಾರೆಂದರೆ ಸರಿಯಲ್ಲ. 2003 ರಿಂದ ಈ ದಾವೆ ಸಲ್ಲಿಸುವವರೆಗೂ ದಾವಾ ಸ್ವತ್ತಿನಲ್ಲಿ ಸುಭಾಷ ಮತ್ತು ಅವರ ಹೆಂಡತಿ ಮಕ್ಕಳು ಸ್ವಾಧೀನದಲ್ಲಿರುವ ಬಗ್ಗೆ ನನಗೆ ಮತ್ತು ಲಕ್ಷಣ, ರಾಮಪ್ಪ ಮತ್ತು ಸತ್ಯಪ್ಪರವರಿಗೆ ಗೊತ್ತಿದೆ ಎಂದರೆ ಸರಿಯಲ್ಲ.

3. ಸುಭಾಷ ನನ್ನಿಂದ ಜಮೀನು ಬರೆಸಿಕೊಂಡ ದಿನದಿಂದ ಇಲ್ಲಿಯವೆರಗೆ ಆತ ಮತ್ತು ಆತನ ಹೆಂಡತಿ ಮಕ್ಕಳು ದಾವಾ ಸ್ವತ್ತಿನ ಸ್ವಾಧೀನಲ್ಲಿದ್ದಾರೆ ನಾನು ಇಲ್ಲವೆಂದರೆ ಸರಿಯಲ್ಲ. ನಾನು ಮತ್ತು ನನ್ನ ಹೆಂಡತಿ ಮಕ್ಕಳು ಸ್ವತಃ ಸ್ವಾಧೀನವನ್ನು ಸುಭಾಷಗೆ ಬಿಟ್ಟುಕೊಟ್ಟಿದ್ದೇವೆಂದರೆ ಸರಿಯಲ್ಲ. ನಾನಾಗಲೀ, ನನ್ನ ಹೆಂಡತಿಯಾಗಲೀ, ನನ್ನ ಮಕ್ಕಳಾಗಲೀ 2003 ರಿಂದ ಸುಭಾಷ ಮತ್ತು ಅವರ ಹೆಂಡತಿ ಮಕ್ಕಳ ಕಬ್ಜೆಗೆ ತಕರಾರು ಮಾಡಿಲ್ಲವೆಂದರೆ ಸಾಕ್ಷಿ ಕಬ್ಜೆಯಲ್ಲಿ ನಾನೇ ಇದ್ದೇನೆ ಎನ್ನುತ್ತಾರೆ. 2003 ರಿಂದ ಆರ್ ಟಿ ಸಿ ಯಲ್ಲಿ ಸುಭಾಷ ಮತ್ತು ಅವರ ಹೆಂಡತಿ ಮಕ್ಕಳ ಹೆಸರು ಕಬ್ಜಾ ನಾತೆಯಿಂದಬಂದಿರುತ್ತದೆ ಎಂದು ನಮೂದಿಸಿದ್ದಾರೆಂದರೆ ಸಾಕ್ಷಿ ನಾನೇ ಕಬ್ಜೆಯಲ್ಲಿದ್ದೇನೆ ಎನ್ನುತ್ತಾರೆ. ನನಗೆ ಈ ದಾವೆ ಸಲ್ಲಿಸುವ ಹಕ್ಕು ಇರುವುದಿಲ್ಲ, ಸುಳ್ಳು ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಈ ದಾವೆ ಸಲ್ಲಲಿಸಲು ನಿಮಗೆ ಕಾರಣ ಉದ್ಭಸಿಸಿಲ್ಲವೆಂದರೆ ಸಾಕ್ಷಿ ಕಬ್ಜೆಯಲ್ಲಿ ನಾನೇ ಇದ್ದೇನೆ ಎನ್ನುತ್ತಾರೆ. ಸುಭಾಷರವರ ಹೆಂಡತಿ ಮಕ್ಕಳ ಹಕ್ಕಿಗೆ ದಕ್ಕೆ ಬರಬೇಕೆಂದು ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ.

(ಕೆ ಎಮ್ ಶಂಕರ್)
2 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ